# ಹೊಸ ಪರಿಯೊ ರಂಗ, ಹೊಸ ಪರಿಯೊ

1. **Ref.:** Shri Purandara Dasara Sahitya Part – 3, Mahatmya Gnyana, edited by Shri Betageri Krishna Sharma and Shri Bengeri Huchha Rayaru, page No. 147.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 629
3. **Note:** This song is not available in SK Ramachandra Rao book.
4. **Note:** Lyrics given without highlights are as per Ref. 1. The wordings given in green highlights are as per Ref. 2. Here, the wordings are slightly different and hence, given separately.
5. **Note:** Vocal song is not available.

ರಾಗ: ಧನ್ಯಾಸಿ ತಾಳ: ಆದಿ

ಹೊಸ ಪರಿಯೊ ರಂಗ, ಹೊಸ ಪರಿಯೊ
ಶಶಿಧರ ವಂದ್ಯನೆ, ಕುಸುಮಜ ಜನಕ ‖ ಪ ‖

ಬೊಮ್ಮಗೆ ನೀ ಪರಬೊಮ್ಮನಾದೆಯೊ ರಂಗ,
ತಮ್ಮಗೆ ನೀ ಮತ್ತೆ ತಮ್ಮನಾದೆಯೊ ರಂಗ,
ಮಗನ(*) ಮಗನ ಮೊಮ್ಮಗನಾದೆಯೊ ರಂಗ,
ಮಗನ ಮಗಳ ನೀ ಮದುವೆಯಾದೆಯೊ ರಂಗ ‖ ೧ ‖

ಮಾವಗೆ ನೀ ಮತ್ತೆ ಮಾವನದೆಯೊ ರಂಗ,
ಮಾವನ ಮಗಳ ಮದುವೆಯಾದೆಯೊ ರಂಗ,
ಭಾವಗೆ ನೀ ಮತ್ತೆ ಭಾವನಾದೆಯೊ ರಂಗ,
ಭಾವಜ ವೈರಿಗೆ ಸಖನಾದೆಯೊ ರಂಗ ‖ ೨ ‖

ಅತ್ತೆಯ ಅರ್ತಿಯಿಂದಾಳಿದೆಯೊ ರಂಗ,
ಅತ್ತೆಯ ಮಗಳ ನೀ ಮದುವೆಯಾದೆಯೊ ರಂಗ,
ಮತ್ತೊಬ್ಬರಿಗುಂಟೆ ಈ ಪರಿ ಮಹಿಮೆಯು
ಕರ್ತೃ ಶ್ರೀ ಪುರಂದರ ವಿಠ್ಠಲನಿಗಲ್ಲದೆ ‖ ೩ ‖

**(*)** ಇಲ್ಲಿ ಪ್ರಾಸ ತಪ್ಪಿದೆ. (Ref.1 ಉಲ್ಲೇಖಿಸಿದ ಪ್ರಕಾರ)

**Note:** Below given lyrics mentioned in green highlights, are as per Ref. 2.

ರಾಗ: ಶಂಕರಾಭರಣ ತಾಳ: ಅಟ

ಹೊಸ ಪರಿಯೇ ರಂಗ, ಹೊಸ ಪರಿಯೇ ಕೃಷ್ಣ
ಶಶಿಧರ ವಂದ್ಯನೆ, ಕುಸುಮಜ ಜನಕನೆ || ಪ ||

ತಮ್ಮಗೆ ನೀ ಮತ್ತೆ ತಮ್ಮನಾದೆ ರಂಗ,
ತಮ್ಮನ ಮಗಳ ಮದುವ್ಯಾದೆ
ಬ್ರಹ್ಮಗೆ ನೀ ಪರಬ್ರಹ್ಮನಾದೆ ರಂಗ,
ನಿಮ್ಮಗಗೆ ಮೈದುನನಾದೆ || 1 ||

ಮಾವನ ಮಗಳ ಮದುವ್ಯಾದೆ ರಂಗ,
ಮಾವಗೆ ಮತ್ತೆ ನೀ ಮಾವನಾದೆ
ಭಾವಗೆ ನೀ ಸಖ ಭಾವನಾದೆ ರಂಗ,
ಭಾವಗೆ ಭವಣೆಯ ಪಡಿಸಿದೆ ರಂಗ || 2 ||

ಅತ್ತೆಯ ಅರ್ತಿಯಿಂದಲಿ ಕೂಡಿ,
ಅತ್ತೆಯ ಮಗಳ ನೀ ಮದುವ್ಯಾದೆ
ಮತ್ತೊಬ್ಬರಿಗುಂಟೆ ಈ ಪರಿ ಮಹಿಮೆ,
ಉತ್ತಮ ಪುರಂದರ ವಿಠಲಗಲ್ಲದೆ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

೧. **ಬೊಮ್ಮಗೆ ನೀ ಪರಬೊಮ್ಮನಾದೆಯೊ ರಂಗ: -**

**ಕುಸುಮಜ** = ಬ್ರಹ್ಮ

**ಪರ** = ಶ್ರೇಷ್ಠ

**ತಮ್ಮಗೆ ನೀ ಮತ್ತೆ ತಮ್ಮನಾದೆಯೊ ರಂಗ : -** ರಾಮಾವತಾರದಲ್ಲಿ ಶೇಷಾವತಾರಿ ಲಕ್ಷ್ಮಣನು ತಮ್ಮನಾಗಿದ್ದ. ಕೃಷ್ಣಾವತಾರದಲ್ಲಿ ಅದೇ ಶೇಷಾವತಾರಿಯಾದ ಬಲರಾಮನು ಅಣ್ಣನಾದ.

**ಮಗನ ಮಗನ ಮೊಮ್ಮಗನಾದೆಯೊ ರಂಗ: -** ಮಗನೆಂದರೆ ಬ್ರಹ್ಮ. ಬ್ರಹ್ಮನ ಮಾನಸ ಪುತ್ರನಾದ ಮರೀಚಿ. ಮರೀಚಿಯ ಮಗನಾದ ಕಶ್ಯಪ ಋಷಿಯ ಮಗ ವಾಮನ.

ಶ್ರೀಹರಿ - ಬ್ರಹ್ಮ (ಮಗ) - ಮರೀಚಿ (ಮಗ) - ಕಶ್ಯಪ - ವಾಮನ (ಮೊಮ್ಮಗ)

**ಮಗನ ಮಗಳ ನೀ ಮದುವೆಯಾದೆಯೊ ರಂಗ: -** ಮಗನ, ಸೂರ್ಯನ ಮದುವೆಯಾದೆ. (ಚಕ್ಷೋಹ್ ಸೂರ್ಯೋ ಅಜಾಯತ ಪುರುಷ ಸೂಕ್ತ)

೨. **ಮಾವಗೆ ನೀ ಮತ್ತೆ ಮಾವನದೆಯೊ ರಂಗ : -** ಮಾವಗೆ ಅಂದರೆ ಕ್ಷೀರ ಸಮುದ್ರಗೆ. ಭಾಗೀರಥಿ ನದಿ ಪರಮಾತ್ಮನ ಪಾದದಿಂದ ಹುಟ್ಟಿದವಳು. ಅವಳು ಸಮುದ್ರ ರಾಜನ ಸತಿಯಾಗುತ್ತಾಳೆ. ಇವರ ಮಗಳಾದ ಲಕ್ಷ್ಮಿಯನ್ನು ಶ್ರೀಹರಿ ಮದುವೆಯಾಗಿದ್ದಾನೆ.

**ಮಾವನ ಮಗಳ ಮದುವೆಯಾದೆಯೊ ರಂಗ : -** ಮಾವ ಅಂದರೆ ಕ್ಷೀರ ಸಾಗರ. (ಮೇಲಿನ ಟಿಪ್ಪಣಿ ನೋಡಿರಿ)

**ಭಾವಗೆ ನೀ ಮತ್ತೆ ಭಾವನಾದೆಯೊ ರಂಗ: -** ಭಾವಗೆ, ಅಂದರೆ ಅರ್ಜುನನಿಗೆ (ಕುಂತಿ ಶ್ರೀಕೃಷ್ಣನ ಸೋದರತ್ತೆ. ಆಕೆಯ ಮಕ್ಕಳು ಅಂದರೆ ಪಾಂಡವರು ಕೃಷ್ಣನ ಭಾವಂದಿರು). ಅರ್ಜುನನಿಗೆ ತನ್ನ ತಂಗಿಯಾದ ಸುಭದ್ರೆಯನ್ನು ಕೊಟ್ಟು ಮದುವೆಮಾಡಿ ತಾನು ಆತನಿಗೆ ಭಾವನಾದ.

**ಭಾವಜ ವೈರಿಗೆ ಸಖನಾದೆಯೊ ರಂಗ: -**
**ಭಾವಜ ವೈರಿ** = ಶಿವ (ಮೃಡ ಸಖ)

೩. **ಅತ್ತೆ** = ಭೂಮಿ, ರಾಮಾವತಾರದಲ್ಲಿ ಭೂದೇವಿ ಅತ್ತೆಯಾಗಿದ್ದಳು (ಸೀತೆಯ ತಾಯಿ)
**ಅತ್ತೆಯ ಮಗಳ** = ಸೀತೆಯ (ಭೂಮಿಜೆ)
**ಅರ್ಥಿ** = ಬೇಡುವವ, ಬಯಸುವವ

**Classification:** Mundige
**Ankita:** purandara vittala
**Location:** NA
**Category:** Mahatmya Jnana
**Sub-Category:** ranga, brahma, Krishna, maga, magalu, maduve, shiva, shatru, atte,
**Pravachana:** NA
**Explanation:** NA